# ಪೈಲಟ್ ಆಗಬೇಕಿತ್ತು ಪಾರ್ಟ್ ಮಾಡುತ್ತಿರುವೆ



**ರಿಷಿಕಾ ಕೆ.ಸಿ.**
ಝೀ ಕನ್ನಡದ 'ಕನ್ಯಾದಾನ'ದ ಚಿತ್ರಾ

◆ **ಕ್ಯಾಮೆರಾ ಎದುರು ನಿಂತಿರುವ ನೀವು, ತಿರುಗಿ ನೋಡಿದರೆ ಏನು ಕಾಣುತ್ತೀರಿ?**

ನಟನೆ ಎನ್ನುವುದು ಆಕಸ್ಮಿಕ ಆಗಿದ್ದರೂ ಹಾಗೆ ಹೇಳಲಾರೆ. ನನಗೆ ಓದಿನಲ್ಲಿ ತುಂಬ ಆಸಕ್ತಿ ಇತ್ತು. ಏರೊನಾಟಿಕಲ್ ಎಂಜಿನಿಯರಿಂಗ್ ಮಾಡುತ್ತಿದ್ದೆ. ಪೈಲಟ್ ಆಗಬೇಕು ಎನ್ನುವುದು ನನ್ನ ಕನಸಾಗಿತ್ತು. ನಟನೆಗಾಗಿ ಆಡಿಷನ್ ಕೂಡ ಕೊಟ್ಟಿರಲಿಲ್ಲ. ಒಂದು ಪಯತ್ನ ಮಾಡೋಣ ಎನ್ನುವ ಕುತೂಹಲದಿಂದ ಫೋಟೊಗಳನ್ನು ಷೇರ್ ಮಾಡಿದೆ. ಅದಕ್ಕಾಗಿ ಶೂಟಿಂಗ್ ಕೂಡ ಮಾಡಿಸಿರಲಿಲ್ಲ. ಇದ್ದ ಒಂದಿಷ್ಟು ಫೋಟೊ ಕಳಿಸಿದೆ. ಆ ಮೂಲಕವೇ ಅವಕಾಶ ಸಿಕ್ಕಿತು. ಕಲರ್ಸ್ ಕನ್ನಡದ 'ಕನ್ಯಾಕುಮಾರಿ'ಯಲ್ಲಿ ನಾಯಕನ ತಂಗಿ ಪಾತ್ರ ನಿರ್ವಹಿಸಿದ್ದೆ. ನಟನೆಯನ್ನೂ ಕಲಿತಿರಲಿಲ್ಲ. ಅದೇ ಮೊದಲ ಪ್ರಾಜೆಕ್ಟ್.

◆ **ಪೈಲಟ್ ಕೆಲಸ ತಪ್ಪಿಸಿಕೊಂಡಿದ್ದೇನೆ ಅಂತ ಪಶ್ಚಾತ್ತಾಪ ಆಗಿದ್ದು ಇದೆಯಾ?**

ಪೈಲಟ್ ಆಗಬೇಕು ಎನ್ನುವುದು ಬಹುದೊಡ್ಡ ಕನಸು. ಕೋವಿಡ್ ಕಾಲಕ್ಕೆ ತರಗತಿಗಳು ಬಾಗಿಲು ಹಾಕಿದವು. ಆನ್‌ಲೈನ್ ಕ್ಲಾಸ್ ಆರಂಭ ಆಗಿದ್ದರಿಂದ ಬೇರೊಂದು ಮಾರ್ಗವು ನನ್ನ ಪಾಲಿಗೆ ತೆರೆದುಕೊಂಡಿದೆ. ಕೆಲಸ ಇಲ್ಲದ ಸಂದರ್ಭದಲ್ಲಿ ಕೆಲವೊಮ್ಮೆ ಸಣ್ಣ ಬೇಸರ ಮನಸಿನಲ್ಲಿ ಸುಳಿಯುತ್ತದೆ. ಪೈಲೆಟ್ ಆಗಬೇಕಿತ್ತು ಎಂದೂ ಅನ್ನಿಸುತ್ತದೆ. ನನ್ನ ಸಹಪಾಠಿಗಳು ತಮ್ಮ ಕೆಲಸದಲ್ಲಿ ತೃಪ್ತಿ ಇಲ್ಲ ಎಂದು ಗೋಳಾಡುತ್ತಾರೆ. ಅದೆಲ್ಲವನ್ನು ನೋಡಿದಾಗ ಇಷ್ಟದ ಕೆಲಸ ಮಾಡುತ್ತಿದ್ದೇನೆ ಎನ್ನುವ ಸಮಾಧಾನ ನನ್ನಲ್ಲಿ ಮೂಡುತ್ತದೆ. ಕೆಲಸದಲ್ಲಿ ಖುಷಿ, ತೃಪ್ತಿ ಇದೆ.

◆ **ಬಣ್ಣದ ಲೋಕದಲ್ಲಿ ಹೊಂದಿಕೊಳ್ಳುವ ಸಮಯ ಹೇಗಿತ್ತು?**

ಇಲ್ಲಿ ಅನುಭವ ಮತ್ತು ವಯೋಮಾನದ ಅಂತರ ಹೆಚ್ಚಿದೆ ಎನ್ನುವುದು ಗೊತ್ತಾಯಿತು. ಅದುವರೆಗೆ ನನ್ನ ಸಮಾನ ವಯಸ್ಕರ ಜೊತೆ ಬರೆಯುತ್ತಿದ್ದೆ. ತುಂಬ ಹೊಸ ಬಗೆಯ ವಾತಾವರಣ. ನಿರ್ದೇಶಕರು, ಸಹಕಲಾವಿದರ ಜೊತೆ ದಿಢೀರೆಂದು ಹೊಂದಾಣಿಕೆ ಸಾಧ್ಯ ಆಗುವಂತೆ ಇರಲಿಲ್ಲ. ಏನೇ ಮಾತನಾಡಿದರೂ ಯೋಚಿಸಬೇಕಿತ್ತು. ದಿನ ಕಳೆದಂತೆ ಪರಿಸ್ಥಿತಿ ಹೊಂದಾಣಿಕೆ ಮಾಡಿಕೊಳ್ಳುತ್ತಾ ಒಂದು ಹಂತಕ್ಕೆ ಬಂದಿದ್ದೇನೆ. ಇಲ್ಲಿ ನನಗೆ ನಟನೆ ಕಲಿಯುವುದಕ್ಕಿಂತ ತಾಂತ್ರಿಕವಾಗಿ ಕೆಲ ಸಂಗತಿಯನ್ನು ತಿಳಿದುಕೊಳ್ಳಲು ಸಮಯ ಬೇಕಿತ್ತು. ಲೈಟಿಂಗ್, ಕ್ಯಾಮೆರಾ ಎದುರುಗೊಳ್ಳುವುದನ್ನು ಸಲೀಸು ಮಾಡಿಕೊಳ್ಳುವುದು ಸವಾಲಾಗಿತ್ತು. ಪರ್ಫಾರ್‌ಮೆನ್ಸ್‌ಗೆ ಪ್ರಾಕ್ಟಿಸ್ ಮಾಡಲಿಲ್ಲ. ನಿರ್ದೇಶಕರು ಇಂತಹ ಫೀಲ್‌ನಲ್ಲಿ ಡೈಲಾಗ್ ಹೇಳಬೇಕು ಎನ್ನುತ್ತಿದ್ದರು. ಪಾತ್ರದ ಸಂಬಂಧವನ್ನು ವೈಯಕ್ತಿಕವಾಗಿ ಕಲ್ಪಿಸಿಕೊಂಡು ಮಾಡುತ್ತಿದ್ದೆ.

◆ **ಮುನ್ನೋಟದ ಕನಸಿನ ಬಗ್ಗೆ ಹೇಳಿ?**

ಬಣ್ಣದ ಲೋಕಕ್ಕೆ ಬಂದು ಮೂರೂವರೆ ವರ್ಷ ಆಯಿತು. ಇದು ಎರಡನೇ ಧಾರಾವಾಹಿ. ಒಂದು ಸಿನಿಮಾ ಕೂಡ ಮಾಡಿದ್ದೇನೆ. ಕಿರುತೆರೆಗೆ ಬರುವ ಹೊತ್ತಿಗೆ ಇದ್ದ ಆಸೆ ಎಂದರೆ, ಲೀಡ್ ಪಾತ್ರ ಮಾಡಬೇಕು ಎನ್ನುವುದಾಗಿತ್ತು. ಅದು ನನಗೆ ಕೈಗೂಡಿದೆ. ಈಗ ಮಾನಸಿಕ ಸಮಸ್ಯೆ ಇರುವ ಪಾತ್ರವನ್ನು ಮಾಡಬೇಕು. ಅಂತಹ ಪಾತ್ರಗಳ ಬಗ್ಗೆ ಒಂದಿಷ್ಟು ಅಧ್ಯಯನ ಮಾಡುವ, ಅವರ ನಡವಳಿಕೆಯನ್ನು ತಿಳಿಯಬೇಕು ಎನ್ನುವ ಕುತೂಹಲ ಇದೆ. ಏಕೆಂದರೆ ಅಂತಹ ಪಾತ್ರದ ಸಂಕೀರ್ಣತೆಯನ್ನು ತಿಳಿಯಬೇಕು.

◆ **ನಿಮ್ಮ ಸ್ನೇಹಿತರು ಗೋಳಾಟದ ಕತೆ ಎಂದು ರೇಗಿಸಿದ್ದು ಇದೆಯಾ?**

ಇಲ್ಲ. ಒಂದು ಪಕ್ಷ ಯಾರಾದರು ಹಾಗೆ ಹೇಳಿದರೂ ಆ ವಿಷಯದಲ್ಲಿ ಲಾಜಿಕ್ ಹುಡುಕಲು ಆಗುವುದಿಲ್ಲ. ನಾವು ಮಾಡುವುದು ಮನರಂಜನೆಯ ಉದ್ದೇಶ ಎನ್ನುವುದು ಎಲ್ಲರಿಗೂ ಗೊತ್ತು. ಹಾಗಾಗಿ ಎಲ್ಲ ನಿಜವನ್ನೇ ತೋರಿಸಲು ಸಾಧ್ಯ ಇಲ್ಲ ಎನ್ನುವುದು ಗೊತ್ತೇ ಇರುತ್ತದೆ. ಸ್ನೇಹಿತರು ಹೆಚ್ಚಾನು ಹೆಚ್ಚು ನನ್ನ ಬಗ್ಗೆ ಮೆಚ್ಚುಗೆ ಮತ್ತು ಹೆಮ್ಮೆಯನ್ನು ವ್ಯಕ್ತಪಡಿಸುತ್ತಾರೆ. ಜನಪ್ರಿಯತೆಯನ್ನು ಕೊಂಡಾಡುತ್ತಾರೆ. ತಮ್ಮ ಗೆಳತಿ ಎಂದು ಹೇಳಲು ಹೆಮ್ಮೆ ಅನ್ನಿಸುತ್ತೆ ಅನ್ನುತ್ತಾರೆ.

◆ **ನಿಮ್ಮ ಖಾಸಗಿ ಕೆಲಸದಲ್ಲಿದ್ದಾಗ ಅಭಿಮಾನಿ ಬಂದು ಸೆಲ್ಫಿಗೆ ಪೀಡಿಸಿದರೆ ನಿಮ್ಮ ಪ್ರತಿಕ್ರಿಯೆ ಹೇಗಿರಬಹುದು?**

ನನ್ನ ಕನಸು ಇರುವುದೇ ಅದು. ಜನ ನನ್ನನ್ನು ಗುರುತಿಸಲಿ, ಅಪರಿಚಿತರೂ ಅಭಿಮಾನದಿಂದ ನನ್ನನ್ನು ಮಾತನಾಡಿಸಬೇಕು ಅನ್ನುವ ಅಪೇಕ್ಷೆ ಇದೆ. ಮನೆಯಿಂದ ಹೊರಗಡೆ ಹೋಗುವಾಗ ನನ್ನನ್ನು ನಾನು ಹೈಡ್ ಮಾಡಿಕೊಳ್ಳಲು ಇಷ್ಟಪಡುವುದಿಲ್ಲ. ಸಾದಾಸೀದಾ ಹೋಗುತ್ತೇನೆ. ನನ್ನ ಕೆಲಸ ಎಷ್ಟೇ ತುರ್ತಾಗಿದ್ದರೂ ನನ್ನನ್ನು ಪ್ರೀತಿಸುವವರಿಗೆ ಮೊದಲು ಸಮಯ ಕೊಡುತ್ತೇನೆ. ಒಂದು ಸೆಲ್ಫಿ ಒಂದೆರಡು ಮಾತಿನಿಂದ ತೊಂದರೆ ಆಗುವುದಿಲ್ಲ. ಅದನ್ನು ಎಂಜಾಯ್ ಮಾಡುತ್ತೇನೆ.

◆ **ನಿಮ್ಮ ಅನುಭವವನ್ನು ಅನ್ಯರಿಗೆ ಹಂಚಿಕೊಳ್ಳುವುದಾದರೆ...**

ಹೊಸದಾಗಿ ಬರುವವರು ಸಡನ್ ಆಗಿ ಹೆಸರು ಮಾಡಬಹುದು. ಸಿಕ್ಕಾಪಟ್ಟೆ ದುಡ್ಡು ಮಾಡಬಹುದು ಎಂದು ಭಾವಿಸಬಹುದು. ಆ ರೀತಿಯ ಆಲೋಚನೆ ಇಟ್ಟುಕೊಳ್ಳಬಾರದು ಎನ್ನುವುದು ಮೊದಲ ಸಲಹೆ. ಅವಕಾಶ ಮತ್ತು ಹಣ ಎನ್ನುವುದು ನಮ್ಮ ಕೈಯಲ್ಲಿ ಇರುವುದಿಲ್ಲ. ಅದು ಪರಿಸ್ಥಿತಿಯನ್ನೇ ಅವಲಂಬಿಸಿರುತ್ತದೆ. ಹಣವನ್ನು ಮಾಡಬೇಕು ಎಂದರೆ ಹೆಸರು ಮಾಡಲು ಆಗಲ್ಲ. ಈ ರಂಗದಲ್ಲಿ ತಾಳ್ಮೆ ಬಹಳ ಮುಖ್ಯ. ಏನೇ ಆದರೂ ಕನಸು ಕಾಣುವುದನ್ನು ಬಿಡಬಾರದು.

■ **ರಾಘವೇಂದ್ರ ಕೆ.**